ರಜನಿಯ ಮದುವೆಯಾಗಿ ನೆಟ್ಟಗೆ ಆರು ತಿಂಗಳೂ ಕಳೆದಿರಲಿಲ್ಲ. ಇನ್ನೂ ಗಂಡನ ಮನೆಗೆ ಅವಳೇ ಹೊಂದಿಕೊಂಡಿರಲಿಲ್ಲ. ತಾವು ಹೋಗಿ ಝುಂಡಾ ಊರುವುದಾ?

ಸೀತೆ ಗಂಟುಮೂಟೆ ಕಟ್ಟಿಕೊಂಡು ಮಗನ ಜೊತೆ ಹೊರಟು ಹೋದ ದಿನ ಇಡೀ ರಾತ್ರಿ ಜಾಗರಣೆ ಮಾಡಿದ್ದು, ಕಣ್ಣೀರು ಹರಿಸಿದ್ದು, ತಮಗೆ ಗೊತ್ತು, ತಾವು ತಲೆಯಿಟ್ಟು ಮಲಗಿದ ದಿಂಬಿಗೆ ಗೊತ್ತು. ಹೆಂಡತಿ ಸತ್ತಾಗಲೂ ಇಷ್ಟು ಅತ್ತಿರಲಿಲ್ಲವೇನೋ ಅನಿಸಿತ್ತು ಭಟ್ಟರಿಗೆ. ವಯಸ್ಸಾಗುತ್ತಾ, ಆಗುತ್ತಾ ಯಾಕೆ ಅಭದ್ರತೆ, ಅಸಹಾಯಕತೆ ಕಾಡಬೇಕು? ಹೆಚ್ಚೆಂದರೆ ಏನಾಗುತ್ತದೆ? ಸಾಯುವುದು ತಾನೇ? ಅದಕ್ಯಾಕೆ ಅಂಜಿಕೆ? ಪಾಪ, ಸೀತೆಯದೂ ತಪ್ಪಿಲ್ಲ. ಗೂಟಕ್ಕೆ ಕಟ್ಟಿದ ದನದಂತೆ ಒಂದೇ ಊರಲ್ಲಿ ಇದ್ದೂ ಇದ್ದೂ ಅವಳಿಗೆ ಕರ್ಕರೆ ಹಿಡಿದಿರಬಹುದು. ಹೊಸ ಊರು, ಹೊಸ ನೀರು, ಹೊಸ ಬದುಕಿನ ಕರೆ ಸೆಳೆದಿರಬಹುದು. ದುರ್ಭಾಗ್ಯವನ್ನು ಸೆರಗಲ್ಲಿ ಕಟ್ಟಿಕೊಂಡು ಬಂದವಳು ಕನಸು ಕಾಣಲೇಬಾರದಾ? ಇರುವ ಒಬ್ಬ ಮಗನನ್ನು ಹೃದಯಕ್ಕೆ ಹಚ್ಚಿಕೊಂಡಿರುವುದು ತಪ್ಪು ಅಂದರೆ ತಮಗೆ ಕುಂಭೀಪಾಕ ನರಕ ಪ್ರಾಪ್ತಿ. ಕಲ್ಲಾಗುತ್ತಾ, ಕರಗುತ್ತಾ, ಕೊರಗುತ್ತಾ, ಮರುಗುತ್ತಾ, ಎಂತಾ ಪರಿಸ್ಥಿತಿಗೂ ಕ್ರಮೇಣ ಹೊಂದಿಕೊಂಡುಬಿಡುವ ಮಾನವಮಾತ್ರರ ಸಹಜ ಸ್ವಭಾವದಂತೆ ಒಂಟಿ ಬದುಕಿಗೆ ಹೊಂದಿಕೊಂಡು ಬಿಟ್ಟಿದ್ದರು ಭಟ್ಟರು. ಸ್ವಯಂಪಾಕ. ಹೊರಗಿನ ಕೆಲಸಕ್ಕೆ ಆಳುಕಾಳುಗಳು. ಕೃಷಿ ಕೆಲಸಕ್ಕೆ ಕಾಯಂ ಆಗಿ ಬರುತ್ತಿದ್ದವರು. ಮನಸ್ಸು ಮಾಡಿದ್ದರೆ ಅಡುಗೆಗೂ ಒಂದು ಜನ ಇಟ್ಟುಕೊಳ್ಳುವುದು ಕಷ್ಟವೇನಾಗಿರಲಿಲ್ಲ. ಆದರೆ, ಹಾಗೆ ಇಟ್ಟುಕೊಳ್ಳಬೇಕೆಂದು ಅನಿಸಿರಲಿಲ್ಲ. ಒಂದು ಮುಷ್ಟಿ ಅವಲಕ್ಕಿಗೆ ಮೊಸರು, ಸಕ್ಕರೆ ಸೇರಿಸಿ ತಿಂದರೂ ಪಥ ನಡೆಯುವಾಗ ಹೊಟ್ಟೆಪಾಡಿಗೆ ಯಾಕಷ್ಟು ಆದ್ಯತೆ ಕೊಡಬೇಕು? ಹೀಗೆಂದುಕೊಂಡರೂ ಒಂದು ಮುಷ್ಟಿ ಅವಲಕ್ಕಿಯಲ್ಲಿ ಕಾಲ ಹಾಕುತ್ತಿದ್ದ ದಿನಗಳು ಕಮ್ಮಿ. ಇದ್ದೂರಲ್ಲಿ, ಸುತ್ತ ಹತ್ತೂರಲ್ಲಿ, ಎಲ್ಲರೂ ಪರಿಚಯ. ಎಲ್ಲರೂ ಬಳಕೆ. ಒಂದಲ್ಲಾ ಒಂದು ಕಡೆಯಿಂದ ಸಂತರ್ಪಣೆಮನೆಯ ಊಟದ ಕರೆ. ಊರಲ್ಲೇ ಯಾರ ಮನೆಯಿಂದಲಾದರೂ ಬೆಳಗಾಮುಂಚೆ ಕ್ಯಾರಿಯರ್‌ನಲ್ಲಿ ಬರುತ್ತಿದ್ದ ತಿಂಡಿ. "ನಿಮಗೇಂತ ಮಾಡಿದ್ದಲ್ಲ. ಮನೆಯವ್ರಿಗೆ ಮಾಡಿದ್ದರಲ್ಲಿ ಏನೋ ಒಂಚೂರು..." ಉಪಚಾರ. ಯಥಾಪ್ರಕಾರ ಕಣ್ಣುಗಳು ಮಂಜುಮಂಜು. ಅನಿವಾರ್ಯಕ್ಕೆ ಆಗುವುದು ರಕ್ತಸಂಬಂಧಿಗಳೇ ಎಂದು ಯಾರು ಹೇಳಿದ್ದು? 'ಆಪತ್ತಿಗೆ ಆದವನೇ ನೆಂಟ'

*****

ಅಣ್ಣನನ್ನು ಮರೆಯಲಿಲ್ಲ ಸೀತೆ. ಒಟ್ಟೊಟ್ಟಿಗೆ ಮೂರು ದಿನ ಮಗ, ಸೊಸೆಗೆ ರಜ ಸಿಕ್ಕಿದರೆ ಮಗನಿಗೆ ದುಂಬಾಲು ಬಿದ್ದು ಊರ ಬಸ್ಸು ಹತ್ತುತ್ತಿದ್ದಳು. ಹೆಣ್ಣುದಿಕ್ಕಿಲ್ಲದ ಮನೆಯನ್ನು ಒಪ್ಪ ಓರಣ ಮಾಡಿ, ಹುಡಿಪುಡಿ ಮಾಡಿಟ್ಟು, "ಎಷ್ಟು ಸೋತುಹೋಗಿದ್ಯೋ? ನಿನ್ನ ನೋಡಿದ್ರೆ ಸಂಕಟ ಆಗುತ್ತೆ..." ಕಣ್ಣೀರಾಗುತ್ತಿದ್ದಳು. ಸೀತೆಗೆ ಮೊಮ್ಮಗ ಹುಟ್ಟಿ ಇದೀಗ ಅವನಿಗೆ ಒಂದೂವರೆ ವರ್ಷ. ಸೊಸೆಗೆ ರಜ ಸಿಕ್ಕಿದೆಯೆಂದು ಊರಿಗೆ ಬಂದಿದ್ದಾಳೆ ಸೀತೆ. "ಬೇಕಿದ್ರೆ ನೀನು ನಾಕು ದಿನದ ಮಟ್ಟಿಗೆ ರಜನಿಯ ಮನೆಗೆ ಹೋಗ್ಬಾ. ಮುಳುಕ ಮಾಡ್ಕೊಡ್ತೀನಿ. ಪಾಪುದ್ದು, ಆಸೆ ಮಾಡ್ಕೊಂಡು ತಿನ್ನುತ್ತೆ" ಎನ್ನುವ ಮಾತಾಡಿ ಕರುಳು ಮಿಡಿದಿದ್ದಳು. ಯಾಕೋ ಸೀತೆ ಚಪ್ಪೆಯಾಗಿದ್ದಾಳೆ. ಮೊದಲಿನ ಲವಲವಿಕೆ ಕಾಣುತ್ತಿಲ್ಲ. ಕೆದಕಿ ಕೇಳಿದರೆ ಒಂದೊಂದು ಸಲ ಒಂದೊಂದು ಮಾತು.

"ನಂಗೂ ವಯಸ್ಸಾಗ್ಲಿಲ್ವಾ? ಬಿ.ಪಿ. ಶುರುವಾಗಿದ್ಯಂತೆ" ಅಂದಳು ಒಂದು ಸಲ.

"ಕಾಲು ಬಂದ ಮಕ್ಕಳನ್ನ ಹಿಡಿಯೋದೂಂದ್ರೆ ಸುಲಭ ಅಲ್ವೋ ಮಾರಾಯ್ನೇ. ಹಿಂದೆ ಹಿಂದೆ